# ಬೊಳುವಾರು ಮಹಮದ್ ಕುಂಞ ಅವರ ಆಯ್ದ ಕಥೆಗಳ ಒಂದು ವಿಶ್ಲೇಷಣೆ

**ಡಾ. ಹೇಮಲತ ಬಿ.ಎಸ್.**
ಕನ್ನಡ ಉಪನ್ಯಾಸಕಿ, ಸೆಂಟರ್ ಫಾರ್ ಮ್ಯಾನೇಜ್ ಮೆಂಟ್ ಸ್ಟಡೀಸ್
ಜೈನ್(ಡೀಮ್ಡುಬಿ ಯುನಿವರ್ಸಿಟಿ)

ಆಧುನಿಕ ಕಥಾ ಜಗತ್ತು ಹೊಸತನದ ಆಳವಿಸ್ತಾರಗಳನ್ನು ಪಡೆದಿರುವುದು. ಅಂದರೆ ಹೊಸ ಪ್ರಜ್ಞೆಯ ವಿಸ್ತಾರತೆ, ಅನುಕರಣ ಶೀಲತೆಯ ಗುಣಗಳು ಕಾಲಧರ್ಮ ಮನೋಧರ್ಮಕ್ಕೆ ಅನುಗುಣವಾಗಿ ಬದಲಾವಣೆ ಹೊಂದುವುದು. ಅಂದರೆ ಬದಲಾವಣೆ ಎಂಬುವುದು ಹೊಸತನದ ಚೈತನ್ಯದ ಚಿಲುಮೆ ಎಂಬುವುದು, ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಜೀವಂತಿಕೆಯ ಲಕ್ಷಣವೂ ಕೂಡ ಹೀಗೆ ಆಧುನಿಕ–ಆಧುನಿಕತೆ ಎಂಬುವುದು ಎಲ್ಲಾ ರೀತಿಯಲ್ಲಿ ಬದಲಾವಣೆಯಾಗಿ ಹೊಸತನದ ಅಸ್ತಿತ್ವವನ್ನು ಹೊಂದುವುದು.

ಕಾಲಧರ್ಮಕ್ಕೆ ತನ್ನನ್ನು ಒಡ್ಡಿಕೊಂಡು ಹೊಸತನದ ತುಡಿತಗಳನ್ನು ಭಾಷಿಕ ರಚನೆಯಲ್ಲಿ ಕಟ್ಟುವ ಕಲಾತ್ಮಕತೆಯ ಕಲೆಯನ್ನು ಸಾಹಿತ್ಯ ಎಂದು ಗುರುತಿಸಿದಂತೆ ತನ್ನ ಅಭಿವ್ಯಕ್ತಿಯ ಕ್ರಿಯೆಗಾಗಿ ಭಾಷೆಯನ್ನು ಮಾಧ್ಯಮವನ್ನಾಗಿಸಿಕೊಂಡು ವಸ್ತುವನ್ನು ಸಿಂಗರಿಸುತ್ತ ಪ್ರತಿಭೆ ಎಂಬ ಪ್ರಜ್ಞೆಯನ್ನು ಚಿಂತನೆ ಎಂಬ ಮನಸ್ಸಿಗೆ, ಆನಂದವೆಂಬ ಭಾವಲೋಕಕ್ಕೆ ಕರೆದೊಯ್ಯುವ ಪ್ರಕ್ರಿಯೆಯ ಕ್ರಿಯೆಯು ಆಗಿರುತ್ತದೆ. ಕಾಲಕ್ಕೆ, ಮನಸ್ಸಿಗೆ, ಭಾವಕ್ಕೆ, ಸಮರ್ಪಕವಾಗಿ ನೀಡಬಲ್ಲ ಪ್ರತಿಭೆಯ ಪ್ರಕ್ರಿಯೆಯು ಸಾಹಿತ್ಯ ಮತ್ತು ಇತರ ಸಾಹಿತ್ಯಕ ಪ್ರಕಾರಗಳು ಆಗಿರುವುದು.

ಪ್ರಸ್ತುತ ಸಂದರ್ಭದಲ್ಲಿ ಬೋಳುವಾರು ಕಥೆಗಳು ಆಧುನಿಕೋತ್ತರ ಕಾಲ ಮತ್ತು ಮನೋಧರ್ಮಕ್ಕೆ ಸಂಬಂಧಿಸಿದ್ದು, ಸ್ವಾತಂತ್ರ್ಯೋತ್ತರದ ಸಾಹಿತ್ಯದಲ್ಲಿ 'ಮತ', 'ಧರ್ಮ' ಮತ್ತು ಸಂಸ್ಕಾರದಿಂದ ಬಂದ 'ಸಂಪ್ರದಾಯ'ಗಳು ಪ್ರಮುಖ ಆಗಿದ್ದರೂ ಹೊಸ ಗಾಳಿಗೆ ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಗಿ ಬದಲಾವಣೆಗಳಾಗಲು ಕಾರಣವಾಯಿತು. ಅಂದರೆ ಹೊಸ ಪ್ರಜ್ಞೆಯ ಅಸ್ತಿತ್ವವನ್ನು ಗುರುತಿಸುವಂತಹ ಅಭಿವ್ಯಕ್ತಿಯ ಕ್ರಿಯೆಗಳು ನಡೆದವು.

ಬೊಳುವಾರು ಕಥೆಗಳು ಚಿಂತನಶೀಲ ಪ್ರವೃತ್ತಿವುಳ್ಳದ್ದು, ತತ್ತ್ವ ಬದ್ಧವಾದದ್ದು, ತರ್ಕಕ್ಕೆ ಒರೆಹಚ್ಚಿ ಪರೀಕ್ಷಿಸುವ, ಪರಿಶೀಲಿಸುವ ಕ್ರಿಯೆ. ಮಾನವನ ಕಾನೂನು ಹಾಗೂ ದೈವ ನಿಯಮಗಳಲ್ಲಿ ಯಾವುದು ಶ್ರೇಷ್ಠ? ಮಹತ್ವವುಳ್ಳದ್ದು ಎಂಬ ವಿಷಯಗಳ ಪರಿಶೀಲನೆಯ ಕ್ರಿಯೆ. ಭಾವನಾತ್ಮಕವಾದದ್ದು, ಭಾವ ಸಂವೇದನೆವುಳ್ಳದ್ದು, ಮತ–ಧರ್ಮಾತೀತವಾದದ್ದು ಅಲ್ಲದೆ ಮನುಷ್ಯ ಧರ್ಮ ಶ್ರೇಷ್ಠವಾಗಿದ್ದಂತೆ ಮನೋಧರ್ಮವೂ ಕೂಡ ಶ್ರೇಷ್ಠವಾದದ್ದು ಎಂದಾಗಿ ಗುರುತಿಸಬಹುದಾಗಿದೆ.

ಸಾಮಾಜಿಕ ವಲಯದಲ್ಲಿ ವರ್ಣ–ವರ್ಗಗಳ ವೈಷಮ್ಯತೆಗಳು ಧರ್ಮಗಳ ನಡುವಿನ ತಿಕ್ಕಾಟ ಬಡತನದಿಂದ ಪಲಾಯನಗೊಳ್ಳುವಲ್ಲಿ ಸೋತ ಜಗತ್ತು, 'ಮನುಷ್ಯನನ್ನು ಮನುಷ್ಯನನ್ನಾಗಿಸುವುದೇ ಧರ್ಮ' ಎಂಬ ಪ್ರಶ್ನೆಗೆ ಉತ್ತರದ ಹುಡುಕಾಟ ಶೋಧನೆಯ ಅಥವಾ ಶೋಧನಾತ್ಮಕತೆಯ ಗುಣವುಳ್ಳದ್ದು ಜಗತ್ತು ಬಡತನದಿಂದ ಕೂಡಿದೆ ಧರ್ಮಕ್ಕೆ ಬದ್ಧವಾಗಿದೆ ಸಂಪ್ರದಾಯ ವಿಚಾರಗಳಿಗೆ ಬದ್ಧವಾಗಿದೆ. ಆಶೆ–ಆಶೋತ್ತರಗಳ ನಡುವೆ ನಡೆಯುವ ಘರ್ಷಣೆಯಲ್ಲಿ ದೈವತ್ವದ, ವಿಧಿಯ ಪಾತ್ರವಿದೆ ಎಂಬ ನಂಬಿಕೆವುಳ್ಳದ್ದು ಭರವಸೆಯುಳ್ಳದ್ದು, ಪಾಪಪ್ರಜ್ಞೆ ಸ್ವರ್ಗ–ನರಕಗಳ ಕಲ್ಪನೆ ನಂಬಿಕೆಗಳು ರಕ್ತಗತವಾಗಿ

ಬಂದಿರುವಂತಿದೆ. ಅದರಿಂದ ಬಿಡುಗಡೆ ಹೊಂದಲು ನಡೆಯುವ ಹೋರಾಟದಲ್ಲಿ ಗೆಲುವು ಕಾಣುವುದೇ ಇಲ್ಲ, ಕಾಣುವುದು ಕೇವಲ ಹತಾಶೆ ಮಾತ್ರ.

ಬೊಳುವಾರು ಅವರ ಕಥೆಗಳು ಮುಸ್ಲಿಂ ಧರ್ಮದ ಮತದ ರೀತಿ, ನೀತಿ, ನಿಯಮ, ರೂಢಿಯಲ್ಲಿರುವ ಸಂಪ್ರದಾಯಗಳನ್ನು ಯಥಾವತ್ತಾಗಿ ಚಿತ್ರಿಸಿರುವುದರೊಂದಿಗೆ ತರ್ಕಬದ್ಧ ಆಲೋಚನೆಗಳನ್ನು ಪಾತ್ರಗಳ ಮೂಲಕ ವ್ಯಕ್ತಪಡಿಸಿರುವುದು. ಒಂದು ಕಾಲ್ಪನಿಕ 'ಊರಿನ' (ಮುತ್ತಪ್ಪಾಡಿ) ಮೂಲಕ ಬದುಕಿನ ಎಲ್ಲ ಮಜಲುಗಳ ಬಗ್ಗೆ ಸ್ತರಗಳ ಬಗ್ಗೆ ತರ್ಕಬದ್ಧತೆಯ ಚಿಂತನೆಗಳು ಅನಾವರಣಗೊಂಡಿವೆ. ಓದುಗನಿಗೆ ಸತ್ಯದರ್ಶನದ ಅನುಭವ, ಅನುಭೂತಿಯು ಉಂಟಾಗುವುದು. ವಾಸ್ತವತೆ ಎಂದರೇನು? ಎಂಬ ಪ್ರಶ್ನೆಗೆ ಉತ್ತರ ಅವರ ಎಲ್ಲಾ ಕಥೆಗಳಲ್ಲೂ ಕಾಣಬಹುದು. ವಾಸ್ತವ ಜಗತ್ತಿನ 'ದುರಂತಗಳ' ಚಿತ್ರಣವನ್ನು ಪಾತ್ರಗಳ ಮೂಲಕ ಚಿತ್ರಿಸಿದ್ದಾರೆ. ಸಾವು–ನೋವು, ದುಃಖ–ದುಮ್ಮಾನಗಳು ಮಾತ್ರವಲ್ಲ ಭಾವನಾತ್ಮಕ, ಛಾಯೆಗಳನ್ನು ಗುರುತಿಸಬಹುದು. ಲೋಕ–ಲೌಕಿಕ ಅಲೌಕಿಕತೆಗಳ ದುರಂತಗಳ ಚಿತ್ರಣವು ವಾಸ್ತವತೆಯ ಚೌಕಟ್ಟಿನಲ್ಲಿ ಕಟ್ಟಿರುವುದು ಮಹತ್ವದ ಸಂಗತಿಯಾಗಿದೆ.

ಮೌಲ್ಯಗಳು ಬದುಕನ್ನು ನಿರ್ಧರಿಸುತ್ತದೆ, ಮೌಲ್ಯವೇ ಬದುಕಿನ ಜೀವಾಳ, ಮೌಲ್ಯಗಳಿಲ್ಲದ ಬದುಕು ಇಲ್ಲ. ಮೌಲ್ಯ ಪ್ರಧಾನವುಳ್ಳ ಸಮಾಜದಲ್ಲಿ ಮಾನವನ ವ್ಯಕ್ತಿತ್ವ ಅಸ್ತಿತ್ವಗಳ ಗತಿ ಸ್ಥಿತಿಗಳ ಆಲೋಚನೆ, ಸಂಘರ್ಷತೆಯ ನೆಲೆಗಳು, ಮೌಲ್ಯ ಪ್ರಧಾನ ಜಗತ್ತಿನಲ್ಲಿ ಮನುಷ್ಯನ ಮಾನಸಿಕ ತೊಳಲಾಟಗಳ ಚಿತ್ರಣವನ್ನು ಕಥೆಗಳಲ್ಲಿ ಗುರುತಿಬಹುದು.

ನವ ವಸಾಹತುಶಾಹಿಯ ಜಗತ್ತಿನಲ್ಲಿ ಕಥೆಗಾರನು ಇದ್ದದ್ದನ್ನು ಇದ್ದಂತೆ ಕಟ್ಟಿದರೂ ಪೂರ್ವದ ಸಂಸ್ಕಾರದ ಭಾವಗಳು ಬೇರು ಬಿಟ್ಟಿದ್ದರೂ ಹೊಸದರ ಪ್ರಭಾವ ಪ್ರೇರಣೆಗಳಿಗೆ ಬದ್ಧವಾದ, ತರ್ಕಬದ್ಧ ಶೋಧನೆಗೆ ತೊಡಗಿಸಿಕೊಳ್ಳುತ್ತ ಉತ್ತರವನ್ನು ಹುಡುಕುವಲ್ಲಿ ಕಾರ್ಯೋನ್ಮುಖವಾಗಿರುವುದು ಒಂದು ವಿಶೇಷ ಸಂಗತಿಯಾಗಿದೆ.

ಬೊಳುವಾರರ ಕಥೆಗಳು ಸಾಮಾಜಿಕ ಬದ್ಧತೆಯಿಂದ ಒಳಗೊಂಡಿರುವುದು ವರ್ಣ–ವರ್ಗತೀತವಾದುದು, ಧರ್ಮ–ಮತಗಳು ಮುಖ್ಯವೇ ಎಂಬ ಪ್ರಶ್ನೆಗೆ ಉತ್ತರಗಳ ಹುಡುಕಾಟ, ಸಂಸ್ಕೃತಿಯ ಪಲ್ಲಟಗಳ ಸ್ವರೂಪ, ಹಿಂದೂ ಸಂಸ್ಕೃತಿಯಲ್ಲಿ ಕಂಡು ಬರುವ ಧರ್ಮ–ಅರ್ಥ–ಕಾಮ–ಮೋಕ್ಷದ ತತ್ತ್ವವು ಸಾರ್ವಕಾಲಿಕ ಚಿಂತನೆಯಲ್ಲಿ ಒಳಗೊಂಡಿರುವುದೇ ಎಂಬ ಪ್ರಶ್ನೆಗೆ ನಡೆಯುವ ಒಂದು ತೌಲನಿಕ ಆಲೋಚನೆ ಅಥವಾ ವಿಶ್ಲೇಷಣೆ, ವಿವೇಚನೆ, ಆರ್ಥಿಕ ಸ್ಥಿತಿ–ಗತಿಗಳು, ಪಲ್ಲಟಗಳು ತತ್ತ್ವ ಜಿಜ್ಞಾಸೆ, ಸ್ತ್ರೀ–ಪುರುಷ ಸಮಾಜದಲ್ಲಿರುವ ಏರಿಳಿತಗಳ ಬಗ್ಗೆ, ಸ್ತ್ರೀ ಸಂವೇದನೆಗಳಿಂದ ಅಭಿವ್ಯಕ್ತಿಗೊಂಡಿರುವ ಕ್ರಿಯೆ ಹೋರಾಟಗಳ ಬಗ್ಗೆ, ಕಾಲ್ಪನಿಕ ಜಗತ್ತು 'ಮುತ್ತಪಾಡಿ' ಅಲ್ಲಿಯ ಬದುಕಿನ ಕ್ರಿಯಾ ಕಲ್ಪಗಳ ಬಗ್ಗೆ ಚಿತ್ರಿಸಿದ ಮನೋಭೂಮಿಕೆಯ ನೆಲೆ. ವಸ್ತು ನಿಷ್ಠತೆ, ಭಾವ ನಿಷ್ಠತೆ, ಕೋಪ – ರೋಷ, ವ್ಯಂಗ್ಯ, ನೋವು, ಸಂಕಟ, ಸ್ವ ಪರೀಕ್ಷೆ, ಆತ್ಮಾವಲೋಕನ, ಸಂತೋಷ, ದ್ವೇಷ, ಅಸೂಯೆ, ಹೀಗೆ ವಾಸ್ತವತೆಯ ವಿವಿಧ ಮಜಲುಗಳ ನಿರೂಪಣೆ ಕಂಡುಬರುವುದು.

ಬೊಳುವಾರು ಅವರ ಕತೆಗಳನ್ನು ವ್ಯಕ್ತಿ ಕೇಂದ್ರಿತ ಮತ್ತು ಸಮಾಜ ಕೇಂದ್ರಿತ ಎಂದಾಗಿ ವಿಂಗಡಿಸಬಹುದು. 'ದೇವರುಗಳ ರಾಜ್ಯದಲ್ಲಿ' ಮತಾಂತರದ ಮೂಲಕ ಹೊಸ ಜಗತ್ತು ಕಾಣಬಹುದೆಂಬ ಆಶಯವಿತ್ತು. ಆದರೆ ಕಲ್ಪನೆಯ, ಭ್ರಮೆಯ ಜಗತ್ತು

ಕಂಡಂತೆ ಇರದೇ ಇರುವುದು ಅನುಭವಕ್ಕೆ ಬಂದುದು, ಹುಟ್ಟಿದ ಧರ್ಮವೇ ಶ್ರೇಷ್ಠ ಎಂಬ ಸಿದ್ಧಾಂತಕ್ಕೆ ಮರಳಿದ್ದು ಪರಿವರ್ತಿತ ಮನೋಭಾವಕ್ಕೆ ಸಾಕ್ಷಿಯಾಗಿದೆ.

ಮತಾಂತರಗೊಂಡ ಕಥಾನಾಯಕನ ಪೂರ್ವದ ಬದುಕು ಚೆನ್ನಾಗಿಯೆ ಇತ್ತು. ಆದರೆ ಶವಸಂಸ್ಕಾರದ ದರ್ಶನವನ್ನು ಕಂಡ ನಂತರ ರೆಹಮತ್ ಆಗಿ ಪರವರ್ತಿತಗೊಂಡ ಬದುಕು ಚೆನ್ನಾಗಿರುತ್ತೆ ಎಂದು ನಂಬಿಕೊಂಡದ್ದು, ಆದರೆ ಅದರ ಪರಿಣಾಮ ದುರಂತ ಎಂಬುವುದು ಮನವರಿಕೆ ಆದದ್ದು, ಈ ಒಂದು ಪರಿವರ್ತನೆ ಧಾರ್ಮಿಕ ಪರಿವರ್ತನೆ, ಇದು ಮಾನಸಿಕ ಪರಿವರ್ತನೆಯಲ್ಲಿ ಎಷ್ಟು ಮಹತ್ವವುಳ್ಳದ್ದು ಎಂಬುದು, ಶೂನ್ಯವನ್ನು ಸಂಪಾದಿಸಿದ ರೆಹಮತ್‌ಗೆ ತನ್ನ ಪೂರ್ವದ ಜೊಸೆಫ್ ಆಗಿದ್ದಾಗ 'ಏನನ್ನೊ ಪಡೆಯಬಹುದು ಎಂಬ ಕನಸು ದೂರದ ಆಸೆ, ಆಶಯ ಇಲ್ಲಿ ಸೋತಿರುವುದನ್ನು ಗುರುತಿಸಬಹುದು.

ಒಂದು ವಸ್ತು ತನ್ನ ಪರಿಪೂರ್ಣತೆಯ ಸ್ವರೂಪವನ್ನು ಪಡೆದುಕೊಳ್ಳುವುದು, ಮೌಲ್ಯ ಬದ್ಧತೆಗಳ ಮೂಲಕ, ಒಂದು ಘಟನೆ ಮತ್ತೊಂದು ಸಂದರ್ಭ ಸನ್ನಿವೇಶಕ್ಕೆ ಪೋಷಕವಾಗಿದ್ದು ಮೂಲ ಉದ್ದೇಶದ ಪರಿಪೂರ್ಣತೆಗಾಗಿ ದುಡಿಯುತ್ತದೆ, ಅಂತರ್ಗತವಾದ ಅಭಿಪ್ರಾಯಗಳನ್ನು ಹೊರ ಹೊಮ್ಮಲು ಅನೇಕ ಸಂದರ್ಭ, ಸನ್ನಿವೇಶಗಳು ಕಟ್ಟಡದಿಂದ 'ಶೋಧನೆ' ಪರಿಶೋಧನೆ ತರ್ಕದ ಆಯಾಮಗಳನ್ನು ಕಾಣಬಹುದಾಗಿದೆ. ಇಲ್ಲಿ ಲೇಖಕರ ಉದ್ದೇಶವು ಫಲಪ್ರದವಾಗಿರುವುದು ಮಾತ್ರವಲ್ಲ, ಫಲಿತಾಂಶವು ಕೂಡ ಹೊರಹೊಮ್ಮಿರುವುದು. ಅದರ ಫಲಿತಾಂಶವೆಂದರೆ ಯಾವುದೇ ಧರ್ಮವು ಶೋಷಣೆಯಿಂದ ಮುಕ್ತವಾಗಿಲ್ಲ, ಮುಕ್ತವಾಗಿಯೂ ಇರದು ಎಂಬ ತತ್ತ್ವ ದರ್ಶನ ಅಥವಾ ಚಿಂತನೆಗಳಿಂದ ಕೂಡಿದೆ 'ದೇವರುಗಳ ರಾಜ್ಯದಲ್ಲಿ' ಈ ಶೀರ್ಷಿಕೆಯೇ ದೇವರುಗಳ ಅಸ್ತಿತ್ವವನ್ನು ಕುರಿತು ಮಾತ್ರವಲ್ಲ ಮನುಷ್ಯನಿಂದ ನಿರ್ಮಾಣಗೊಂಡ ಮತ–ಧರ್ಮ ಜಿಜ್ಞಾಸೆಗಳು ಅಥವಾ ತತ್ವಗಳು ಮನುಷ್ಯನ ಮೇಲೆ ಬೀರುವ ಪ್ರಭಾವ ಅದರಿಂದ ಉಂಟಾಗುವ ಪರಿಣಾಮಗಳು ಹೀಗೆ ವರ್ಣ, ವರ್ಗ, ಮತ, ಧರ್ಮ, ಮೌಲ್ಯಗಳಲ್ಲಿ ಸಂಸ್ಕಾರ ಸಂಸ್ಕೃತಿಯ ಕ್ರಿಯೆ ಪಲ್ಲಟಗಳು ಆದಾಗ ದುರಂತ ಭಾವಗಳ ದರ್ಶನವು ಈ ಕಥೆಯಲ್ಲಿ ಅನಾವರಣಗೊಂಡಿದೆ. ಹತಾಷೆ ನಿರಾಶೆ, ನೋವು, ಸಂಕಟ ಬಡತನ ಕಷ್ಟ ಇವುಗಳನ್ನು ಮನುಷ್ಯನು ಅನುಭವಿಸುವುದು ಅನಿವಾರ್ಯತೆಯಾಗಿದೆ ಎಂಬುದು ಈ ಕತೆಯಲ್ಲಿ ಕಂಡುಬರುವುದು. "ಶೋಷಣೆ" (ಎಲ್ಲಾ ಬಗೆಯ)ಯಿಂದ ಮುಕ್ತವಾಗಲು ಸಾಧ್ಯವೇ? ಅದರ ಅಂತ್ಯವೆಂದರೆ 'ಸಾವು' ಇದೇನೇ ಹೀಗೆ ಅನೇಕ ಆಲೋಚನೆ. ಅನೇಕ ಘಟನೆಗಳು, ಸಂವೇದನೆಗಳು ಕಥಾವಸ್ತುವನ್ನು ವರ್ಣನಾತ್ಮಕವಾಗಿ ಚಿತ್ರಿಸಿರುವುದು ಉದ್ದೇಶದತ್ತ ತೆರಳಿರುವ ಪ್ರಕ್ರಿಯೆಯ ನೆಲೆಯನ್ನು ಕಾಣಬಹುದಾಗಿದೆ. ಅನೇಕ ಘಟನಾವಳಿಗಳು ಒಂದು 'ವಸ್ತು'ವನ್ನು ವಿನ್ಯಾಸಗೊಳಿಸುವುದೇ ಅಭಿವ್ಯಕ್ತಿಯ ಕ್ರಿಯೆಯಾಗಿದೆ.

ಬೋಳುವಾರು ಅವರ ಕಥೆಗಳಲ್ಲಿ ಮನುಷ್ಯ ಸಂಬಂಧಗಳ ಸ್ವಭಾವಗಳನ್ನು ಕುರಿತ ಚಿತ್ರಣಗಳು, ಧರ್ಮ, ಮತ, ಸಮಾಜಗಳ ನಡುವೆ ಮನುಷ್ಯನ ಬದುಕು, ವ್ಯಕ್ತಿಯು ಜೀವನವನ್ನು ಕಟ್ಟಿಕೊಳ್ಳುವಲ್ಲಿ ನಡೆಯುವ ನಡೆಸುವ ಹೋರಾಟ, ಮಾನಸಿಕ ಸಂಘರ್ಷಗಳು, ನೋವು ದುಃಖ, ದುಮ್ಮಾನ ಸಂಕಟಗಳೊಂದಿಗೆ ಬದುಕಿದ್ದು ಆರ್ಥಿಕವಾಗಿ ಸಾಮಾಜಿಕ ಸ್ತರಗಳಿಂದ ಮೇಲೆ ಬರಲು ಸಾಧ್ಯವಿಲ್ಲದ ಹತಾಶೆಯ ಜಗತ್ತಿನ ಅನಾವರಣ ಮುಂದೆ ಒಳ್ಳೆಯದಾಗಬಹುದು ಎಂಬ ಆಶೆ–ಆಶೆಯಗಳ ತುಡಿತ, ಹೋರಾಟದಿಂದ ಪಡೆದ ಫಲ ಶೂನ್ಯ ಆಶೋತ್ತರಗಳು ಎಲ್ಲಿ ಹುಟ್ಟಿದವೋ ಅಲ್ಲಿಯೇ ಅಂತ್ಯಗೊಳ್ಳುವುದರ ದುರಂತ ಚಿತ್ರಣಗಳು, ಮತಾಂತರದಿಂದ ಹೊಸ ಬದುಕು ಕಟ್ಟಿಕೊಳ್ಳಲು ಸಾಧ್ಯವೆಂಬ ವಿಶ್ವಾಸ ಭರವಸೆಗೆ

ಮೋಸವುಂಟಾಗುವುದು, ಧಕ್ಕೆ ಉಂಟಾಗುವುದು. ಬಡವ ಬಡವನಾಗಿಯೇ ಉಳಿಯುವನೇ ಹೊರತು ಶ್ರೀಮಂತನಾಗಲಿ ಅಥವಾ ಸಮಾಜದಲ್ಲಿ ಒಂದು ಸ್ಥಾನವನ್ನು ಪಡೆಯಲು ಸಾಧ್ಯವಿಲ್ಲದ ಹತಾಶೆಯ ಸ್ಥಿತಿ, ಮನೋವೈಜ್ಞಾನಿಕ ಹಿನ್ನೆಲೆಯಲ್ಲಿಯು ಕಥೆಗಳನ್ನು ಅವಲೋಕಿಸಬಹುದು, ಮೌಲ್ಯಗಳು ನಂಬಿಕೆಗಳು ಮೌಢ್ಯತೆಗಳು ಹಂತ ಹಂತವಾಗಿ ವಿಸ್ತಾರಗೊಳ್ಳುತ್ತ ತರ್ಕಬದ್ಧವಾದ ರೀತಿಯಲ್ಲಿ ಪಾತ್ರಗಳನ್ನು ಚಿತ್ರಿಸಿರುವುದು ವಿಶೇಷ ತಂತ್ರಗಾರಿಕೆ, ವಿನ್ಯಾಸವೆಂದು ಹೇಳಬಹುದು, ಘಟನೆ–ಸನ್ನಿವೇಶ–ಸಂದರ್ಭಕ್ಕೆ ಅನುಗುಣವಾಗಿ ಪಾತ್ರಗಳ ಅಂತರಂಗದ ವೇದನೆ ಸಂವೇದನೆಗಳನ್ನು ಬಿತ್ತರಿಸಿರುವುದು, ಪುರುಷ ಪ್ರಧಾನ ಜಗತ್ತಿಗಿಂತ ಸ್ತ್ರೀ ಜಗತ್ತು ಪ್ರಧಾನವಾಗಿದೆ.

'ಆಖಿರತ್' ಕಥೆಯು ಧರ್ಮ ಜಿಜ್ಞಾಸೆವುಳ್ಳದ್ದು. ಕೇವಲ ನಂಬಿಕೆಯಿಂದಲೆ ಬದುಕುವುದೇ ಸತ್ಯ ಎಂದು, ಧಾರ್ಮಿಕ ಆಚರಣೆಯ ಮೌಲಿಯ ಮಾತೇ ಸತ್ಯ ಎಂದು ನಂಬಿದ ಅದ್ದು ಅಂತೆಯೇ ಕತ್ತಲೆಯಲ್ಲಿ ಬದುಕುವ ಹುನ್ನಾರ ನಡೆಸಿದ, ಎರಡು ಧರ್ಮಗಳ ಘರ್ಷಣೆಗಳ ಬಗ್ಗೆ ಚಿತ್ರಣ ಹಾಗೂ ವೈಯಕ್ತಿಕತೆಯ ಸ್ಥಾನವನ್ನು ಗುರುತಿಸಬಹುದು. ಹೀಗೆ ಕಥೆಗಳು ಕಾಲದೊಂದಿಗೆ ಬೆಸೆದುಕೊಂಡಿದ್ದು ವಾಸ್ತವತೆಯಲ್ಲಿ ಮನುಷ್ಯನ ಬದುಕಿನ ಚಿತ್ರಣವನ್ನು ಅನೇಕ ಘಟನೆಗಳ ಮೂಲಕ ಚಿತ್ರಿಸಿರುವುದನ್ನು ಕಾಣಬಹುದು.

ಧರ್ಮ ಎಷ್ಟು ಮುಖ್ಯ? ಯಾಕೆ? ಹೇಗೆ? ಈ ಪ್ರಶ್ನೆಗಳ ಸುತ್ತ ಕಟ್ಟಿರುವ ಕತೆ 'ಅಖಿರತ್' ಅಲ್ಲಿ ಮೌಲ್ಯಗಳ ಅನಾವರಣ, ಧರ್ಮ ತರ್ಕ ಚಿಂತನೆ ಧಾರ್ಮಿಕ ಪ್ರತಿನಿಧಿಯ ತೀರ್ಮಾನವೇ ದೇವರ ತೀರ್ಮಾನ ಎಂಬ ನಂಬಿಕೆ ಈ ನಂಬಿಕೆ ಕಳೆದುಕೊಂಡ ಬಗೆ, ಮೌಢ್ಯತೆಗಳ ತರ್ಕಬದ್ಧ ಚಿಂತನೆ ಎರಡು ಧರ್ಮಗಳಲ್ಲಿ ಯಾವುದು ಶ್ರೇಷ್ಠ? ಈ ಪ್ರಶ್ನೆಗೆ ಉತ್ತರದ ರೂಪದಲ್ಲಿ ಶೋಧನೆ ಪರಿಶೋಧನೆ ಸಂಶೋಧನೆಗಳಲ್ಲಿ ಕಂಡುಬಂದ ತೀರ್ಮಾನವೇ 'ಮನುಷ್ಯ ಧರ್ಮ'. ಗಂಡು–ಹೆಣ್ಣು ಬೇಧವಿಲ್ಲದ ವೈಜ್ಞಾನಿಕ ಜಗತ್ತು ಬೆಳವಣಿಗೆಯ ಸೂಚನೆಯಾಗಿದ್ದರೂ ಧಾರ್ಮಿಕ ಜಿಜ್ಞಾಸೆವುಳ್ಳವರು ಮೂಢನಂಬಿಕೆಗೆ ಸಿಕ್ಕಿ ನಲುಗಿ ಸಾಂಸಾರಿಕ ಜಗತ್ತಿನಿಂದ ವಂಚಿತಗೊಂಡದ್ದು, ಸ್ವರ್ಗ–ನರಕ ಧರ್ಮ–ಅಧರ್ಮ ಮೌಲ್ಯ–ಅಪಮೌಲ್ಯಗಳ ಸಂಘರ್ಷವು ಎರಡು ಧಾರ್ಮಿಕ–ಧರ್ಮಗಳ 'ಮನಸ್ಸು'ಗಳ ನೆಲೆಯಿಂದ ಚಿತ್ರಿತಗೊಂಡಿವೆ.

12ನೇ ಶತಮಾನದಲ್ಲಿ ಕಂಡುಬಂದ ತತ್ತ್ವದರ್ಶನದ ನಿಲುವು ಇಲ್ಲೂ ಕಾಣಬಹುದು. 'ಕಾಯಕತತ್ವ', ಧರ್ಮ ಸಮನ್ವಯತೆ, ಸಮಾನ ಬದುಕು, ನಿಸರ್ಗವು ಎಲ್ಲರಿಗೂ ಒಂದೇ, ಸಮ ಸಹಬಾಳ್ವೆಯ ನೆಲೆ. ಕೆಳವರ್ಗದ ದುಡಿಮೆಯೇ ಪ್ರಧಾನವಾದ ಸಾಂಸಾರಿಕ ಚಿತ್ರಣವನ್ನು ಈ ಕಥೆಯಲ್ಲಿ ಕಾಣಬಹುದು. ನೆರೆಹೊರೆಯರ ಸ್ನೇಹ ಆತ್ಮೀಯತೆ ಗೆಳೆಯನ ಸಂಸಾರವನ್ನು ಸರಿ ಮಾಡಲು ನಡೆಸಿದ ಹೋರಾಟದಲ್ಲಿ ಮತಧರ್ಮಗಳು ಅಡ್ಡಬಾರದೆ ಮನುಷ್ಯತ್ವಯೇ ಕೇಂದ್ರಬಿಂದು. ಸಂಸಾರ, ಧರ್ಮ, ಸಮಾಜ, ವ್ಯಕ್ತಿ ಮೌಲ್ಯಗಳು ಎಷ್ಟು ಅಗತ್ಯ ಅನಿವಾರ್ಯ ಎಂಬ ಬಗ್ಗೆ ಗಮನಿಸಿ. ಅಖಿರತ್ ಕಥೆಯ ಮೂಲ, ಆಶಯ ಎಂದರೆ ಬದಲಾವಣೆ, ಪರಿವರ್ತನೆ. ಜೀವನ ಎಂದರೆ ಬದಲಾವಣೆ ಹೊಸದನ್ನು ಸ್ವೀಕರಿಸುವಲ್ಲಿ ಯೋಚನೆ, ತರ್ಕಬದ್ಧತೆಯ ಚಿಂತನೆಗಳು, ಹೊಸತನದ ಸ್ವೀಕಾರದ ಅನಿವಾರ್ಯತೆಯ ಸ್ವರೂಪ, ಸಂಶಯ, ಅನುಮಾನಗಳ

ನಿವಾರಣೆಗೆ ಬೇಕಿರುವ ಮದ್ದು ಎಂದರೆ ಆಲೋಚಿಸಬಲ್ಲ ಬೌದ್ಧಿಕ ಸಾಮರ್ಥ್ಯ ಶಿಕ್ಷಣ, ತಪ್ಪುಗಳ ನಿರ್ಣಯಿಸಬಲ್ಲ ಸಾಮರ್ಥ್ಯವಿರುವ ಮಾನಸಿಕ ಸ್ಥಿತಿ.

ಸಂಪ್ರದಾಯ–ನಿಯಮ–ವಿಧಿಕ್ರಿಯೆ–ಸ್ತ್ರೀ ಆಚರಿಸಬೇಕಾದ ರೂಢಿಗತ ಪದ್ಧತಿಗಳನ್ನು ಎಂದು ತಿಳಿಸುವ ಮತ್ತು ಸ್ತ್ರೀ ಸಂವೇದನೆವುಳ್ಳ ಕಥೆ 'ಇದ್ದತ್' ಸೂಕ್ಷ್ಮ ಸಂವೇದನೆವುಳ್ಳ ಕಥೆ. ಸೂತಕದಲ್ಲಿ ಗಂಡ ಸತ್ತರೆ ಹೆಂಡತಿ ಆಚರಿಸಬೇಕಾದ ಆಚರಣೆಯ ಸುತ್ತ ಹೆಣದಿರುವ ಕಥೆಯಾಗಿದೆ. ವಿವಾಹಕ್ಕೆ ವಯೋಮಿತಿ ಬೇಕೆ? ಇದೆಯಾ! ಈ ಪ್ರಶ್ನೆಗೆ ಉತ್ತರ ಇಲ್ಲ ಎಷ್ಟೇ ವಯಸ್ಸಿನ ಹೆಣ್ಣಿನೊಂದಿಗೆ ವಿವಾಹ ಅಂತರ ಒಂದು ಪೀಳಿಗೆಯವರಾಗಿದ್ದರೂ ಚಿಂತಿಸುವುದಿಲ್ಲ. ಆರ್ಥಿಕವಾಗಿ ಹಿಂದುಳಿದ, ಚಿಕ್ಕಮ್ಮನ ಆಶ್ರಯದಲ್ಲಿ, ಬೈಗುಳದಲ್ಲಿ, ಕೆಲಸದವಳಂತೆ ಬೆಳೆದವಳು, ವಿವಾಹಕ್ಕೆ ಯೋಗ್ಯವಲ್ಲದ ವ್ಯಕ್ತಿಯೊಂದಿಗೆ ಮನಸ್ಸಿನ ಭಾವನೆಗಳನ್ನು ರೂಪಿಸಿಕೊಳ್ಳಲು ಸಾಧ್ಯವಾಗದೆ ಇದ್ದಾಗ, ಮನೆಯ ಪರಿಸ್ಥಿತಿ ಒತ್ತಡಕ್ಕೆ ಸಿಕ್ಕಿ ಶ್ರೀಮಂತನನ್ನು ವಿವಾಹ ಮಾಡಿಕೊಂಡಿದ್ದು, ಇರಲು ಮನೆ, ತಿನ್ನಲು ಊಟ, ಆಹಾರ, ಉಡಲು ವಸ್ತ್ರ, ಇದ್ದರೆ ಅಷ್ಟೇ ಜೀವನ! ಎಂಬ ತತ್ವಕ್ಕೆ ಬದ್ಧವಾಗಿದ್ದು, ಅನ್ಯ ಯುವಕನನ್ನು ಕಂಡದ್ದು ಅರಿವಿಲ್ಲದಂತೆ ಭಾವಕ್ಕೆ ವಶವಾದದ್ದು ತಪ್ಪು ಸರಿ ಈ ಗೊಂದಲದಲ್ಲಿ ಸಿಲುಕಿ ಹಾಕಿಕೊಂಡದ್ದು, ತನ್ನಷ್ಟಕ್ಕೆ ತಾನು ಆಲೋಚಿಸುತ್ತ 'ಮೌಲ್ಯ'ಗಳೊಂದಿಗೆ ಬದುಕು ನಡೆಸುವ ಬಗೆ, ಸಂಕೀರ್ಣತೆಯಿಂದ ವಿಸ್ತೃತದವರೆಗೂ ಹಬ್ಬಿಕೊಂಡಿರುವ ಭಾವಾಭಿವ್ಯಕ್ತಿಯ ಚಿತ್ರಣ, ದೇವರಲ್ಲಿ ನಿವೇದಿಸಿಕೊಳ್ಳುವ, ಧಾರ್ಮಿಕ ಮೌಲ್ಯಗಳು ತಪ್ಪುಗಳನ್ನು ಕ್ಷಮಿಸುವಂತೆಯೂ, ಧರ್ಮದ ಜಾಗೃತಿಯಲ್ಲಿ ಸದಾ ಇರಲಿ ಎಂದು ದೇವನಲ್ಲಿ ವಿನಂತಿಸಿಕೊಳ್ಳುವಲ್ಲಿ ಮೆಹರುನ್ನೀಸಾಳ ಮಾನಸಿಕ ತೊಳಲಾಟಗಳ ಅನೇಕ ಸಂದರ್ಭಗಳ ಸನ್ನಿವೇಶಗಳ ಚಿತ್ರಣವೇ 'ಇದ್ದತ್'.

'ಮನಸ್ಸು' ಕೆಲಸವಿಲ್ಲದಿದ್ದರೆ ದೆವ್ವದ ಕಾರ್ಖಾನೆ ಎಂಬ ಉಕ್ತಿಯನ್ನು ಮೆಹರುನ್ನೀಸಾಳ ಪಾತ್ರದಲ್ಲಿ ಕಂಡುಕೊಂಡರು ಆಕೆಯ ಸ್ಥಿತಿಯ ಬಗ್ಗೆ ಮರುಕ ಪಡಬೇಕೋ ದುಃಖಿಸಬೇಕೋ ಗೊತ್ತಿಲ್ಲ, ಓದುಗನಿಗೆ ಆಕೆಯ ಮನಸ್ಸಿನ ಕ್ರಿಯಾಸ್ಥಿತಿಯನ್ನು ಕುರಿತು ಆಲೋಚಿಸುವುದು ಮುಖ್ಯವಾಗಿರುತ್ತದೆ, ಹಾಗೆ ಮನೋವೈಜ್ಞಾನಿಕ ನೆಲೆಯಲ್ಲಿ ಪರಿಶೀಲಿಸಬಹುದು.

ಇಸ್ಲಾಂ ಧರ್ಮಿಯ ಸಮುದಾಯದಲ್ಲಿನ ಬದುಕು–ಜೀವನ, ಸ್ತ್ರೀ–ಪುರುಷರ ನಡುವೆ ಇರುವ ಅಂತರ, ಕಾನೂನು, ಧಾರ್ಮಿಕ ಶೋಷಣೆ, ಭಾವನೆಗಳಿಗೆ ಬೆಲೆ ಇಲ್ಲದಿರುವಿಕೆ, ಶಿಕ್ಷಣ ಇಲ್ಲದೆ ಇರುವುದು ವಿಚಾರ ಮಾಡಬಲ್ಲ ಸಾಮರ್ಥ್ಯವನ್ನು ಕಳೆದುಕೊಂಡದ್ದು, ಪರಂಪರೆಯ ಮೌಲ್ಯವೇ ಪ್ರಧಾನ ಎಂಬ ನಂಬಿಕೆಯಿರುವ ಬದುಕಿನ ಸ್ಥಿತಿ ಕಂಡುಕೊಂಡದ್ದು. ಲೇಖಕರ ಆಶಾವಾದಿಗಳು ಹೇಗೆಂದರೆ ಹೊಸ ಜಗತ್ತನ್ನು ವಿಚಾರ ಪ್ರಧಾನವಾದ ಬದುಕನ್ನು ಸಮಾಜವನ್ನು ಕಟ್ಟುವುದು ಆಶಯವಾಗಿದೆ.

'ಒಂದು ತುಂಡು ಗೋಡೆ' ಸಾಂಕೇತಿಕ ಕಥೆ, ಸಂಕೀರ್ಣತೆಯ ಗುಣ ಹೊಂದಿದೆ. ಎರಡು ಧರ್ಮಗಳ ನಡುವೆ ಇರುವ ನಂಬಿಕೆಗಳು ರಾಜಕೀಯ, ಸಾಮಾಜಿಕ ವ್ಯವಸ್ಥೆಯಲ್ಲಿ ಮನುಷ್ಯರ ಮನಸ್ಸನ್ನು ಬೆಸೆದುಕೊಂಡಿರುವುದರ ಬಗೆಗಿನ ವಿಚಾರಗಳು ಮತ್ತು ಎರಡು ಧರ್ಮಗಳ ನಡುವೆ ನಡೆಯುವ ರಾಜಕೀಯ ಘರ್ಷಣೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕ್ರಿಯೆಯಲ್ಲಿ ತೊಡಗಿರುವುದರ ಚಿಂತನೆ ಕಥೆಯಲ್ಲಿ ವ್ಯಕ್ತಗೊಂಡಿದೆ.

ಎಲ್ಲೋ ನಡೆಯುವ ಘಟನೆಗಳು ಧಾರ್ಮಿಕ ಜಿಜ್ಞಾಸೆವುಳ್ಳವರಿಗೆ ಹತ್ತಿರದಲ್ಲೇ ನಡೆದಂತೆ ಕಂಡು ಬರುವ, ಭಾಸವಾಗುವ ಬಗೆಯಲ್ಲಿ ಧರ್ಮವೇ ಜೀವನ–ಬದುಕು ಎಂದು ನಂಬಿ ನಡೆಯುವುದು ಒಂದಾದರೆ ಹೆಸರಿಗೆ, ಕೀರ್ತಿಗೆ ಧರ್ಮದ ಹೆಸರಿನಲ್ಲಿ ನಡೆಯುವ ಹೋರಾಟದಲ್ಲಿ ಭಾಗಿಯಾಗಿದ್ದು, ಏನೋ ದೊಡ್ಡದನ್ನು ಸಾಧಿಸಿದ್ದೇನೆ ಎಂದು ತಿಳಿಸಲು ಜಂಬ ಕೊಚ್ಚಿಕೊಳ್ಳಲು ತಂದ ಒಂದು ತುಂಡು ಗೋಡೆಯು ಭಾಷಣಕ್ಕೆ ವಸ್ತುವಾದರೆ ಮತ್ತೊಬ್ಬರಿಗೆ ಅದು ಕೇವಲ ಗೋಡೆಯ ತುಂಡು. ಒಂದು ಇಟ್ಟಿಗೆ ಅದನ್ನು ಮನೆಯಲ್ಲಿಟ್ಟು ಕೊಳ್ಳುವುದು ಒಂದು ಧರ್ಮದವರಿಗೆ ಪಾಪ–ಅಸಹ್ಯ. ಆದರೆ ಇನ್ನೊಂದು ಧರ್ಮದವರಿಗೆ ಆ ತುಂಡು ಗೋಡೆಯನ್ನು ತಂದು ಮನೆ ನಿರ್ಮಿಸಿ ಮನೆಯಲ್ಲಿಟ್ಟು ಅಲ್ಲಿ ಪೂಜಿಸುವ ಧನ್ಯತೆಯ ಆಶೆಯ. ಅನ್ಯ ಧರ್ಮಿಯ ಮನೋಧರ್ಮಗಳ ಚಿಂತನೆಗಳನ್ನು, ಧರ್ಮಗಳ ಬಿಕ್ಕಟ್ಟನ್ನು, ಧರ್ಮ ರಾಜಕೀಯ ವ್ಯವಸ್ಥೆಗಳ ಬೆಸುಗೆಯಲ್ಲಿ ಸಮಾಜದ ಮೇಲೆ ಉಂಟಾಗುವ ಪರಿಣಾಮಗಳನ್ನು ಇಲ್ಲಿ ಕಾಣಬಹುದು.

ಈ ಕತೆಯ ಕೇಂದ್ರ ಬಿಂದು ರೊಟ್ಟಿ ಪಾತುಮ್ಮ, ಆಕೆ ಕೆಳವರ್ಗದ ಶ್ರಮಜೀವಿ, ಇರುವುದಕ್ಕೆ ವಾಸಿಸುವುದಕ್ಕೆ ಸ್ವಂತ ಗೃಹವಿಲ್ಲ, ಸ್ವಂತ ಗೃಹ ನಿರ್ಮಾಣಕ್ಕಾಗಿ ಆಶೆ ಪಡುವ, ಅದನ್ನು ಪಡೆಯಲು ಶ್ರಮಿಸುವ ಜೀವಿಯ ಕಥೆಯಾಗಿದೆ. ರಾಜಕೀಯ ವಲಯದಿಂದ ನಿವೇಶನ ದೊರೆತದ್ದು ಅಲ್ಲಿ ಮನೆ ನಿರ್ಮಾಣ ಮಾಡಬೇಕು. ದುಡಿದದ್ದು ಉಳಿಸಲು ಸಾಧ್ಯವಾಗದಿದ್ದಾಗ ನಿವೇಶನ ಸರ್ಕಾರವೇ ತೆಗೆದುಕೊಳ್ಳುತ್ತದೆ ಈ ಮಾತನ್ನು ಕೇಳಿದ ರೊಟ್ಟಿ ಪಾತುಮ್ಮ ದುಡ್ಡು ಕೂಡಿಹಾಕಲು ಪ್ರಾರಂಬಿಸುವುದು.

ಅಕ್ಕಿ ತಂದು ನೆನೆಹಾಕಿ ರುಬ್ಬಿ ರೊಟ್ಟಿತಟ್ಟಿ ಮಾರುವುದು, ಸ್ವಲ್ಪ ಹೆಚ್ಚು ಹಣ ಮಾಡಬೇಕಾಗಿದೆ ಕಾರಣ ಮನೆ ಕಟ್ಟಬೇಕು. ಸ್ವತಃ ಮನೆಯಲ್ಲಿ ವಾಸಿಸಬೇಕು ಎಂಬ ಆಸೆಯಿಂದ ರೊಟ್ಟಿಯ ಆಕಾರದಲ್ಲಿ ಸ್ವಲ್ಪ ಚಿಕ್ಕದು ಮಾಡಿ ಎರಡು ರೊಟ್ಟಿ ಜಾಸ್ತಿ ಮಾಡಿ ಆ ಎರಡು ರೊಟ್ಟಿಯ ದುಡ್ಡನ್ನು ಆಚಾರಿ ಬಳಿ ಕೂಡಿಹಾಕಿದ್ದು, ಆ ಹಿಂದೆ ಹಣದ ಜೋಪಾನದ ಬಗ್ಗೆ ಯೋಚಿಸಿದ್ದು, ಬಂಗಾರ, ಬೆಳ್ಳಿಕೊಳ್ಳುವ ಚಿಂತನೆ ಆದರೆ ಪಡೆಯುವಾಗ ನೀಡುವ ಬೆಲೆಗೂ, ಮರಳಿ ಚಿನ್ನ ಬೆಳ್ಳಿ ಕೊಟ್ಟು ಹಣ ಪಡೆಯುವಾಗ ವ್ಯತ್ಯಾಸವಾಗುವ ಕಾರಣ ಆ ನಿರ್ಧಾರ ಕೈಬಿಟ್ಟು ಆಚಾರಿಯ ಬಳಿ ವಿನಂತಿಸಿಕೊಂಡದ್ದು, ದಿಕ್ಕಿಲ್ಲದ ಹೆಣ್ಣಿನ ಸ್ಥಿತಿ ಅರಿತು ಆಚಾರಿ ಹಣ ಜೋಪಾನ ಮಾಡಲು ಒಪ್ಪಿದ್ದು ಪರಸ್ಪರ ಧರ್ಮ ಸಹಿಷ್ಣು, ಸಹಬಾಳ್ವೆ, ದಯೆ, ಅನುಕಂಪ ಮಾನವೀಯತೆಯ ಅಂಶಗಳಾಗಿವೆ. ವ್ಯವಹಾರ–ವ್ಯಾಪಾರ ಕೇವಲ ಲಾಭ–ಗಳಿಕೆಗಾಗಿ ಮಾತ್ರ ಎಂಬ ಅಂಶವನ್ನು ಮೀರಿದ್ದಾಗಿದೆ.

ಒಂದು ಮನೆ ಕಟ್ಟುವ ಯೋಜನೆ, ಮಗದೊಂದು ಕಟ್ಟಡವನ್ನು ಉರುಳಿಸುವ ಕ್ರಿಯೆ. ಈ ಕಥೆಯಲ್ಲಿ ರೊಟ್ಟಿ ಪಾತುಮ್ಮ ಚಂದ್ರಣ್ಣ ತಂದ ಇಟ್ಟಿಗೆಯ ತುಂಡನ್ನು ತಂದು ತನ್ನ ಮನೆಯಲ್ಲಿರಿಸಿ ಕಟ್ಟುವ ಆಸೆ ಇದ್ದರೆ. ಚಂದ್ರಣ್ಣ ದೆಹಲಿಯಿಂದ ತಂದ ತುಂಡು ಪ್ರಚಾರಕ್ಕೆ ಸನ್ಮಾನಕ್ಕೆ ಬಂದದ್ದಾದರೂ, ಹಿಂದೂ ಧರ್ಮಿಯರ ಮನೆಯಲ್ಲಿ ಅದನ್ನು ಇರಿಸಿಕೊಳ್ಳಲು ಸಾಧ್ಯವೇ? ಇಲ್ಲ ಅಂತೆಯೇ ರೊಟ್ಟಿ ಪಾತುಮ್ಮನಿಗೆ ಬೇಕಿದ್ದ ಗೋಡೆಯ ತುಂಡು ಗೋಡೆಯ ತುಂಡು ಬಾವಿಯಲ್ಲಿ ಹಾಕಿರುವುದು ತಪ್ಪು ಅವಳ ಕನಸು ಕೇವಲ ಕನಸಾಗಿಯೇ ಉಳಿಯಿತು. ಎರಡು ಧರ್ಮಗಳ ಸಮಾಜಗಳು ರಾಜಕೀಯ ವ್ಯವಸ್ಥೆಯೊಳಗೆ ಸಿಲುಕಿ ಅಸ್ತಿತ್ವವನ್ನುಳಿಸಿಕೊಳ್ಳಲು ಹೆಣಗುವಂತಾಗುವ ಪರಿಸ್ಥಿತಿಯು ಚಿತ್ರಿತಗೊಂಡಿದೆ.

ಭಾರತದಲ್ಲಿ ಎಲ್ಲ ಧರ್ಮಿಯರು ಸಮಾನವಾಗಿ ಬದುಕಬಲ್ಲರು ಎಂಬುವುದು; ಹಿಂದು–ಮುಸ್ಲಿಂ ಧರ್ಮಿಯರ ಸ್ನೇಹದ ನಂಬಿಕೆಯ ಬೆಸುಗೆಯನ್ನು ಕಾಣಬಹುದು. ತಂದೆ ಸತ್ತ ನಂತರ ಮಕ್ಕಳು ಪಾತುಮ್ಮಾಳ ಹಣ ಜೋಪಾನ ಮಾಡಿ, ಬಡ್ಡಿ

ಅಥವಾ ಸ್ವಲ್ಪ ಹಣ ಹೆಚ್ಚಿಗೆ ಸೇರಿಸಿ ಹಿಂದಿರುಗಿಸಿದ್ದು ಸಾಮರಸ್ಯತೆಯ ಜೊತೆಗೆ ಮಾನವೀಯ ಅನುಕಂಪವೂ ಇರುವುದನ್ನು ಗುರುತಿಸಬಹುದು.

ಗ್ರಾಮೀಣ ಪ್ರದೇಶವು ಕರಣಗಳ ಪ್ರಭಾವಕ್ಕೆ ಪ್ರೇರಣೆ ಒಳಗಾಗಿರುವ ಸೂಕ್ಷ್ಮತೆಯ ಅರಿವು 'ಆಚಾರಿ ಕಟ್ಟೆ' ಎಂಬ ಚಿನ್ನದ ವ್ಯಾಪಾರವು 'ಶ್ರೀನಿವಾಸ ಅಂಡ್ ಸನ್ಸ್ ಜ್ಯೋಲರಿಸ್" ಎಂದು ನಾಮಫಲಕ ಮಾಡಿಸಿ ವ್ಯಾಪಾರ ವ್ಯವಹಾರ ವಿಸ್ತರಿಸಿಕೊಂಡಿರುವುದನ್ನು ಗುರುತಿಸಬಹುದು. ಅಷ್ಟೇ ಅಲ್ಲ ಅಭಿವೃದ್ಧಿ ಪ್ರಗತಿಯ ಅಂಕುರಾವಸ್ಥೆಯ ಸ್ಥಿರ ಎಂದುಸ ಕೂಡ ಹೇಳಬಹುದು. ಬದಲಾವಣೆಗಳೇ ಅಭಿವೃದ್ಧಿಯ ಸೂಚಕ ಧಾತುಗಳು ಆರ್ಥಿಕ ವಲೆಯದ ಅಭಿವೃದ್ಧಿಯ ಸೂಚಕ ವಾಹಕಗಳು ಕೂಡ.

'ಒಂದು ತುಂಡು ಗೋಡೆ' ವಿವರಣಾತ್ಮಕ ಕಥೆ, ಮಾನಸಿಕ ತುಮುಲ, ಸೂಕ್ಷ್ಮತೆ, ಸಂವೇದನೆವುಳ್ಳದ್ದು, ಎಳೆ ಎಳೆಯಾಗಿ ವಿವರಿಸುವ ನಿರೂಪಣಾ ವಿಧಾನ, ಧಾರ್ಮಿಕ ಜಿಜ್ಞಾಸೆ, ಧೋರಣೆವುಳ್ಳ ಎರಡು ಧರ್ಮದ ಸಮಾಜವನ್ನು ಪ್ರತಿನಿಧಿಸುವುದು. ರಾಜಕೀಯ, ಧಾರ್ಮಿಕ, ಸಾಮಾಜಿಕ ಮೌಲ್ಯಗಳು ನಂಬಿಕೆಗಳು ಬದುಕಿನಲ್ಲಿ ಬೆಸೆದುಕೊಂಡಿರುವುದನ್ನು ಕಥೆಯಲ್ಲಿ ಗುರುತಿಸಬಹುದಾಗಿದೆ.

'ಕರಣ'ಗಳ ನೆಲೆಯಿಂದ ಆಲೋಚಿಸಿದಾಗ ಗೃಹವಿಲ್ಲದವರಿಗೆ ಗೃಹ ನಿರ್ಮಾಣಕ್ಕೆ ನಿವೇಶನವನ್ನು ನೀಡಿರುವ 'ಅರಸು' ಅವರ ರಾಜಕೀಯ ಸಾಮಾಜಿಕ ಕಳಕಳಿಯಲ್ಲಿ ಪಾತುಮ್ಮ ಪಡೆದ ನಿವೇಶನ, ಅದರಲ್ಲಿ ಮನೆಕಟ್ಟಿಕೊಂಡು ವಾಸ ಮಾಡುವ ಅವಳ ಪಾಡು, ಹಣ ಸೇರಿಸಿದ ಬಗೆ, ಹಣಕ್ಕಾಗಿ ದುಡಿಮೆ, ತನಗೆ ಉಂಟಾಗುವ ಆಯಾಸವನ್ನು ಲೆಕ್ಕಿಸದೆ ಶ್ರಮದಿಂದ ವಾಸಕ್ಕೆ ಬೇಕಿರುವಷ್ಟು ಸ್ವಂತ ಮನೆಯ ನಿರ್ಮಾಣದ ಕನಸು, ಅದು ತಮ್ಮದು ಎಂಬ ಭಾವನಾತ್ಮಕ ಸಂಬಂಧ ಆತ್ಮ ತೃಪ್ತಿಗಾಗಿ ಹೆಣಗುವ, ಹೋರಾಡುವ ಆಕೆಯ ಆತ್ಮಶಕ್ತಿ, ಚೈತನ್ಯತೆಗಳನ್ನು ಅನೇಕ ನಿದರ್ಶನಗಳ ಮೂಲಕ ಚಿತ್ರಿಸಿರುವುದು.

ಮತ–ಧರ್ಮ ಸಂಪ್ರದಾಯ ಸಂಸ್ಕೃತಿಯ ನೆಲೆಯಿಂದ ಆಲೋಚಿಸಿದ್ದು– ವರ್ಗ, ವರ್ಣ ವೈಷಮ್ಯತೆ ಕಾಣದಾದರೂ, ಧರ್ಮ ಸಹಿಷ್ಣುತೆಯ ಸ್ಥಿತಿಯ ಚಿತ್ರಣ ನೀಡಿರುವಲ್ಲಿ ವಾಸ್ತವತೆಗೆ ನಿದರ್ಶನವಾಗಿದೆ. ಭಾರತ ಹಿಂದೂ ಜಗತ್ತು ಅದರ ಮನೋಭಾವ, ಮನೋ ಭೂಮಿಕೆಯ ತತ್ವ ಚಿಂತನೆ ಒಂದಾದರೆ, ಮಗದೊಂದು ಇಸ್ಲಾಂ ಧರ್ಮದ ತತ್ತ್ವ ಚಿಂತನೆ, ಆದರೆ ಎರಡು ಬೇರೆ ಮಾರ್ಗಗಳಾಗಿದ್ದರೂ ಮನುಷ್ಯ ಧರ್ಮದಲ್ಲಿ ಮನೋಧರ್ಮದಲ್ಲಿ ಸಹಿಷ್ಣುತೆ ಮತ್ತು ಸಮನ್ವಯತೆಯ ಪ್ರಜ್ಞೆಯು ತರ್ಕಬದ್ಧವಾಗಿ ನಿರೂಪಣೆಯಾಗಿರುವುದನ್ನು ಗುರುತಿಸಬಹುದಾಗಿದೆ.